
# ಪರಿಶ್ರಮಕ್ಕೆ ಪ್ರತಿಫಲ



■ ನಾಗೇಶ ಜಿ. ವೈದ್ಯ
ಕಲೆ: ಸಂತೋಷ್ ಸಸಿಹಿತ್ಲು

ರತ್ನಗಿರಿಯಲ್ಲಿ ಜಯಸಿಂಹ ಎಂಬ ಜಮೀನುದಾರನಿದ್ದ. ಅವನ ಬಳಿ ರಾಮು ಕೆಲಸ ಮಾಡಿಕೊಂಡಿದ್ದ. ರಾಮು ಕೇವಲ ಹತ್ತು ವರ್ಷದ ತಬ್ಬಲಿ.

ರಾಮು ದಿನವಿಡೀ ತೋಟದಲ್ಲಿ ಕೆಲಸ ಮಾಡುತ್ತಿದ್ದ. ಸಂಜೆ ಮನೆ ಕೆಲಸವನ್ನೂ ನೋಡಿಕೊಳ್ಳಬೇಕಿತ್ತು. ಅವನಿಗೆ ಮುಂಜಾನೆ ತಿಂಡಿ, ಮಧ್ಯಾಹ್ನ – ರಾತ್ರಿಯ ಊಟಕ್ಕೆ ಒಂದೊಂದು ರೊಟ್ಟಿ ಕೊಡುತ್ತಿದ್ದರು. ರಾಮು ತೀವ್ರ ಹಸಿವಾದಾಗ ನೀರು ಕುಡಿಯುತ್ತಿದ್ದ. ಮನೆಯ ಪಡಸಾಲೆಯಲ್ಲಿ ಮಲಗಲು ಅವನಿಗೊಂದು ಚಾಪೆ, ಕಂಬಳಿಯನ್ನು ಕೊಡಲಾಗಿತ್ತು.

‘ಕೆಲಸದವನಿಗೆ ಹೊಟ್ಟೆ ತುಂಬ ಊಟ ಕೊಟ್ಟರೆ, ಮುಂದೆ ನಮಗೇ ಎದುರಾಗಬಹುದು. ಅವನನ್ನು ಹೀಗೇ ಇಟ್ಟಿರಬೇಕು’ ಎಂದು ಹೆಂಡತಿ ರತ್ನಮ್ಮಳಿಗೆ ಹೇಳುತ್ತಿದ್ದ ಜಮೀನುದಾರ. ಆಕೆಯದು ಮಾತೃ ಹೃದಯ. ರಾಮುವಿಗೆ ಅರೆಹೊಟ್ಟೆ ಮಲಗಿಸಲು ತುಂಬಾ ವೇದನೆಯಾಗುತ್ತಿತ್ತು. ಆದರೆ, ಗಂಡನನ್ನು ಎದುರು ಹಾಕಿಕೊಳ್ಳುವ ಧೈರ್ಯವೂ ಇರಲಿಲ್ಲ. ಒಂದು ದಿನ ಜಮೀನುದಾರ ಮನೆಯಲ್ಲಿ ಇಲ್ಲದ ವೇಳೆ ರಾಮುವನ್ನು ಕರೆದು, ಇನ್ನು ಮುಂದೆ ಪ್ರತೀ ರಾತ್ರಿ ಇನ್ನೊಂದಿಷ್ಟು ರೊಟ್ಟಿ, ಪಲ್ಯವನ್ನು ಕಾಗದದಲ್ಲಿ ಕಟ್ಟಿ ಪಡಸಾಲೆಯಲ್ಲಿ ಗುಟ್ಟಾಗಿ ಎಸೆಯುವುದಾಗಿಯೂ, ಸದ್ದು ಮಾಡದೇ ಅದನ್ನು ತಿಂದು ಮಲಗಬೇಕೆಂತಲೂ ಹೇಳಿದಳು. ಅಂದಿನಿಂದ ರಾಮುವಿಗೆ ಹೊಟ್ಟೆ ತುಂಬ ಊಟ ಸಿಗತೊಡಗಿತು.

ಅದೊಂದು ರಾತ್ರಿ ಜಮೀನುದಾರನಿಗೆ ನಿದ್ದೆ ಬಾರದೇ, ಪಡಸಾಲೆಗೆ ಬಂದ. ಇದನ್ನು ಗಮನಿಸದ ರಾಮು ರೊಟ್ಟಿಯನ್ನು ತಿನ್ನುವುದರಲ್ಲಿ ನಿರತನಾಗಿದ್ದ. ಜಯಸಿಂಹನಿಗೆ ಕೋಪ ಉಕ್ಕಿ ಬಂದಿತು. ಚಿಕ್ಕ ಹುಡುಗನೆಂದು ಮನೆಯಲ್ಲೇ ಇರಿಸಿಕೊಂಡರೆ, ಈತ ಅಡುಗೆ ಮನೆಯಿಂದ ರೊಟ್ಟಿಯನ್ನು ಕದ್ದು ತಂದು ತಿನ್ನುತ್ತಿದ್ದಾನೆ ಎಂದು ಭಾವಿಸಿದ. ರಾಮುವನ್ನು ಬಾರುಕೋಲಿನಿಂದ ಒಂದೇ ಸಮನೆ ಥಳಿಸಿದ. ಜಮೀನುದಾರ ಹೊಡೆಯುವುದನ್ನು ನಿಲ್ಲಿಸಿ ಮನೆಯೊಳಗೆ ಹೋದರೂ, ನೋವು ತಾಳದೇ, ರಾಮು ನರಳಾಡಿದ.

ಮುಂಜಾನೆ ಹೆಂಡತಿಗೆ ಎಲ್ಲವನ್ನೂ ಹೇಳಿ ರಾಮುವಿಗೆ ಕಳ್ಳನೆಂಬ ಪಟ್ಟ ಕಟ್ಟಿದ ಜಮೀನುದಾರ. ಆಕೆ ನೊಂದುಕೊಂಡಳು. ಜ್ವರದಿಂದ ನರಳುತ್ತಿದ್ದ ರಾಮುವಿನ ಮೈಮೇಲಿನ ಬಾಸುಂಡೆಯನ್ನು ನೋಡಿ ಕರುಳು ಚುರ್ರೆಂದಿತು. ಜಯಸಿಂಹ ತೋಟದ ಕಡೆಗೆ ಹೋಗುತ್ತಿದ್ದಂತೆ, ರಾಮುವಿನ ಮೈಗೆ ತೈಲವನ್ನು ಹಚ್ಚಿದಳು. ‘ನನ್ನನ್ನು ಕ್ಷಮಿಸಿ ಬಿಡು ಮಗೂ. ನನ್ನಿಂದಾಗಿ ನಿನಗೆ ಈ ಅವಸ್ಥೆ ಬಂದದ್ದು. ನಿನ್ನ ಕಷ್ಟ ನೋಡಲಾಗದು. ನೀನು ರಂಭಾಪುರಕ್ಕೆ ಹೋಗು. ಅಲ್ಲಿ ನನ್ನ ಅಜ್ಜಿ ಇದ್ದಾಳೆ. ನಾನು ಅವಳಿಗೆ ಪತ್ರ ಬರೆದಿದ್ದೇನೆ. ಇದರಲ್ಲೇ ವಿಳಾಸವಿದೆ. ಈಗಲೇ ನೀನು ಹೊರಟು ಹೋಗು. ಅವಳು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ’. ಎನ್ನುತ್ತಾ ಪತ್ರವೊಂದನ್ನು ಅವನಿಗೆ ಕೊಟ್ಟಳು.

ರಂಭಾಪುರಕ್ಕೆ ತೆರಳಲು ಕಾಡಿನ ಮೂಲಕ ಹೋಗಬೇಕಿತ್ತು. ರಾಮು ಆಕೆಗೆ ನಮಿಸಿ, ಹೊರಟು ನಿಂತ. ಕಾಡಿನಲ್ಲಿ ಓಡುತ್ತ ನಡೆದ ರಾಮುವಿಗೆ ನಡುವೆ ದಾರಿ ತಪ್ಪಿತು. ದೂರದಲ್ಲೊಂದು ಗುಡಿಸಲು ಕಂಡು, ಅತ್ತ ತೆರಳಿದ. ಮುಚ್ಚಿದ್ದ ಬಾಗಿಲನ್ನು ತಟ್ಟಿದ. ಕುರೂಪಿ ರಾಕ್ಷಸಿಯೊಬ್ಬಳು ಗುಡಿಸಲಿಂದ ಹೊರಬಂದಳು. ‘ಈ ರಾಕ್ಷಸಿಯನ್ನು ನಿದ್ದೆಯಿಂದ ಎಬ್ಬಿಸುವ ಭಂಡ ಧೈರ್ಯವೇನೋ ನಿನಗೆ?’ ಎಂದು ಆರ್ಭಟಿಸಿದಳು. ಅವಳ ಕಪ್ಪು ಮುಖ, ಕೋರೆ ಹಲ್ಲು, ವಿಕಾರ ರೂಪ ಕಂಡು ನಡುಗಿದ ರಾಮುವಿನ ಬಾಯಿಂದ ಮಾತೇ ಹೊರಡಲಿಲ್ಲ. ರಾಮು ನಡುಗುತ್ತ ತನ್ನ ಕಥೆಯನ್ನು ಹೇಳಿದ. ಅವಳಿಗೂ ಅನುಕಂಪ ಮೂಡಿತು. ಅವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಹಾರಿದಳು. ರಂಭಾಪುರದ ಪ್ರವೇಶ ದ್ವಾರದಲ್ಲಿ ಅವನನ್ನು ಇಳಿಸಿ, ‘ಹೊರಡು, ಮಗು ನಿನ್ನನ್ನು ಬಿಟ್ಟಿದ್ದೇನೆ’ ಎಂದು ಹೇಳಿ ಮಾಯವಾದಳು.